

# ಇದು ಗೊಂಬೆ ಹಬ್ಬವಯ್ಯ..

ನವರಾತ್ರಿ ಬೊಂಬೆ ಹಬ್ಬ ಎಂದೇ ಪ್ರಸಿದ್ಧಿ. ಮಕ್ಕಳಿಗೆ ಪ್ರಿಯವಾದ ಗೊಂಬೆಗಳನ್ನು ಸಾಲಾಗಿ ಜೋಡಿಸಿ ಪೂಜೆ ಮಾಡುವುದರಲ್ಲಿ ಮಕ್ಕಳ ಸಂಭ್ರಮವೂ ಅಡಗಿದೆ. ಮಕ್ಕಳಿಗೆ ಇಷ್ಟವಾಗುವ ಥೀಮ್ ಆಧಾರಿತ ಗೊಂಬೆಗಳನ್ನು ಇಟ್ಟು ಸಿಹಿತಿಂಡಿ ಮಾಡಿ ಎಲ್ಲರಿಗೂ ಹಂಚಿ ಹಬ್ಬವನ್ನು ಮತ್ತಷ್ಟು ಅರ್ಥಪೂರ್ಣವಾಗಿಸಿ.

■ **ಶಾರದಾ ಶಾಮಣ್ಣ, ಬೆಂಗಳೂರು**

ನವರಾತ್ರಿ ಹಬ್ಬ ಎಂದರೆ ಮಕ್ಕಳಿಗೆ ಎಲ್ಲಿಲ್ಲದ ಸಂಭ್ರಮ. ಮಕ್ಕಳ ಅಚ್ಚುಮೆಚ್ಚಿನ ಬೊಂಬೆಗಳ ಹಬ್ಬ ಅದು. ಆಶ್ವಯುಜ ಮಾಸದ ನವರಾತ್ರಿಯಲ್ಲಿ ಶಕ್ತಿ ದೇವತೆಯರ ಪೂಜೆಯ ಸಂಭ್ರಮ ಒಂದು ಕಡೆಯಾದರೆ ಮಕ್ಕಳಿಗೆ ಬೇರೆ ಬೇರೆ ವಿಧದ ಗೊಂಬೆ ಇಡುವ ಸಡಗರ ಮತ್ತೊಂದು ಕಡೆ. ಕೇವಲ ಅಂಗಡಿಯಲ್ಲಿ ಸಿಗುವ ಗೊಂಬೆಗಳನ್ನು ತಂದು ಒಂದು ಕಡೆ ಕೂರಿಸುವಲ್ಲಿ ಕಲ್ಪನೆಯನ್ನು ಬೆರೆಸಿ ಜ್ಞಾನಾರ್ಜನೆ, ಮನರಂಜನೆ ಒದಗಿಸುವುದು ಬೊಂಬೆ ಹಬ್ಬದ ಉದ್ದೇಶವಾಗಿರಬೇಕು. ಆಗ ನಮ್ಮ ಸಂಸ್ಕೃತಿ ತಾನೇ ಬೆಳೆದಂತಾಗುವುದು. ಕಲಾತ್ಮಕವಾಗಿ ಗೊಂಬೆಗಳನ್ನು ಕೂರಿಸಲು ಪೂರ್ವಭಾವಿ ಸಿದ್ಧತೆ ನಡೆಸಿ ಗೊಂಬೆಗಳನ್ನು ಅಚ್ಚುಕಟ್ಟಾಗಿ ಜೋಡಿಸಬೇಕು.

ಹಬ್ಬಕ್ಕೆ ಮೊದಲೇ ಅಟ್ಟದಿಂದ ಬೊಂಬೆಗಳನ್ನು ಇಳಿಸಿ ಕೊಂಡು ರಿಪೇರಿ ಕೆಲಸಗಳನ್ನು ಮಾಡಿ ಮುಗಿಸಿಕೊಳ್ಳಿ. ಪಟ್ಟದ ಗೊಂಬೆಗಳ ಸೀರೆ, ಬದಲಾಯಿಸುವುದು, ಈಗ ಮಾರುಕಟ್ಟೆಯಲ್ಲಿ ಬೊಂಬೆಗಳಿಗೆಂದೇ ವಿಶೇಷ ಆಭರಣಗಳು, ಉಡುಪುಗಳು ಬಂದಿವೆ. ಅವುಗಳನ್ನು ತಂದು ಮನೆಯಲ್ಲೇ ಮಕ್ಕಳ ಸಹಾಯದಿಂದ ಗೊಂಬೆಗಳನ್ನು ಅಲಂಕರಿಸಿ. ಅಲಂಕರಿಸಿ ಸಿದ್ಧವಾದ ಗೊಂಬೆಗಳನ್ನೇ ತರುವುದು ಅಷ್ಟೊಂದು ಸೂಕ್ತವಲ್ಲ.

ಹೋದ ಸಲ ಗೊಂಬೆ ಇಟ್ಟ ಪ್ರದರ್ಶನಕ್ಕಿಂತ ಈ ಸಲ ಸ್ವಲ್ಪ ಹೊಸತನವಿರಲಿ. ತಪ್ಪುಗಳು ಪುನರಾರ್ತನೆ ಆಗದಿರಲಿ. ಮಕ್ಕಳು ಈ ಕಾರ್ಯಕ್ರಮದಲ್ಲಿ ಹೆಚ್ಚಾಗಿ ಒಳಗೊಳ್ಳುವಂತೆ ಮಾಡಿ. ಜೋಡಣೆಗಳು ಹೀಗಿರಲಿ: ಗೊಂಬೆಗಳನ್ನು